ಫ್ರೆಂಚ್‌ರಾಕ್ಸ್ ಸಬ್ ಡಿವೀಜ್.

ತಾರೀಖು 21ನೇ ಏಪ್ರೆಲ್ 1887.

ಯಿದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಫ್ರೆಂಚ್‌ರಾಕ್ಸ್ ಸಬ್ ಡಿವೀಜ್ ಮಂಡ್ಯ ಸಬ್ ರಿಜಿಸ್ಟ್ರಾರ್ ಆಫಿಸಿನಲ್ಲಿ ಬೇವಾರಸಾಗಿ ಇರತಕ್ಕ ಈ ಕೆಳಗೆ ವಿವರಿಸಿ ಯಿರುವ ದಸ್ತಾವೇಜನ್ನ ಹಾಜರ್ಮಾಡಿದವರಾಗಲಿ ಅಥವಾ ಅಧಿಕಾರ ಹೊಂದಿದ ಮುತಾಲೀಕರಾಗಲಿ ಈ ತಾರೀಖು ಲಾಗಾಯಿತು ಒಂದು ತಿಂಗಳೊಳಗಾಗಿ ಹಾಜರಾಗಿ ವಾಪಸ್ ಪಡಿಯಬೇಕು, ತಪ್ಪಿದಲ್ಲಿ ರಿಜಿಸ್ಟ್ರೇಷ್ಟ್ ಆಕ್ಟ್ 85ನೇ ಸೆಕ್ಷನ್ ಮೇರೆ ನಾಶ ಪಡಿಸಲ್ಪಡುತ್ತೆ.

ದಸ್ತಾವೇಜಿನ ನಂಬರ್.	ದಸ್ತಾವೇಜು ಹಾಜರಾದ ತಾರೀಖು.	ರಿಜಿಸ್ಟ್ರಿಗೆ ಹಾಜರಾದ ತಾರೀಖು.	ರಿಜಿಸ್ಟ್ರಿ ದಾದ ತಾರೀಖು.	ದಸ್ತಾವೇಜನ್ನ ಬರದು ಕೊಟ್ಟವರ ಹೆಸರು ಮತ್ತು ವಾಸಸ್ಥಳ.	ದಸ್ತಾವೇಜನ್ನ ಬರಸಿ ಕೊಂಡವರ ಹೆಸರು ಮತ್ತು ವಾಸಸ್ಥಳ.	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತ್ತು.
165 1884—85	16—2—85	20—2—85	21—2—85	ಹೊನಗನಹಳ್ಳಿಯಲ್ಲಿ ಯಿರುವ ವಕ್ಕಲಿಗರ ಕರೀ ಚೌಡೇಗೌಡನ ಮಗ ಮರಿಚೌಡ	ಹೊನಗನಹಳ್ಳಿಯಲ್ಲಿರುವ ವಕ್ಕಲಿಗರ ಪುಟ್ಟೇಗೌಡ ತಂದೆ ಹೆಸರು ಚವುಡೇಗೌಡ	ಹೊನಗನಹಳ್ಳಿ ಗ್ರಾಮದಲ್ಲಿ ಬಂಜರಿಗೆ ಪಶ್ಚಿಮ ಗಿರಿಯನ ಹೊಲಕ್ಕೆ ಉತ್ತರ ಗಿರಿಯನ ಚನ್ನನ ಹೊಲಕ್ಕೆ ಪೂರ್ವ ಕಟ್ಟೆ ಯೀರಿಗೆ ದಕ್ಷಿಣ ಈ ಮಧ್ಯೆ ಇರುವ ನನ್ನ ಪಟ್ಟೆ ನಂಬರು 289ನೇ ಬನ್ನಿ ಕಟ್ಟೆ ಹೊಲ ಬೀಜವರೀ 0—0—4 ಕಂದಾಯ 0—9—4 ಯಿದನ್ನ (25–0–0) ರೂಪಾಯಿಗೆ ಆಧಾರ ಇದಕ್ಕೆ ಬಡ್ಡಿ ವರುಷ ವೊಂದಕ್ಕೆ ವರಹಾ 1ಕ್ಕೆ 2 ಹಣದ ಮೇರೆ ನಡದಪ್ಪ ದಿವಸಕ್ಕೆ ಬಡ್ಡೀಕೊಡುವದಾಗಿ.

ಬಿ. ಕೆ. ವೆಂಕಟವರದಯ್ಯಂಗಾರ್,
ರಿಜಿಸ್ಟ್ರಾರ್.

ಹಾಸನದ ಡಿಸ್ಟ್ರಿಕ್ಟ್.

1887—88ನೇ ಮುಂದಿನ ಸರ್ಕಾರಿ ಸಾಲಿನಲ್ಲಿ ಈಕೆಳಗೆ ನಮೂದು ಮಾಡಿರುವ ಜಂಗಲ್‌ಗಳಲ್ಲಿ ಹಾಲಿ ಕತರಾಯಿಸಿ ಬಿದ್ದಿರುವ 10,000 ಸಲಅಡಿ ಚೌಬೀನೆಯನ್ನು ಗಾಡಿ ಹೋಗುವ ಸ್ಥಳಕ್ಕೆ ಯೆಳದು ಅವಶ್ಯಕವಾದರೆ ಕುಯಿದು ಹಾಸನದ ಡಿಪೋಕ್ಕೆ ಹೇರುವದಕ್ಕೆ ಇದರ ಮೂಲಕ ದರಖಾಸ್ತುಗಳನ್ನು ಅಪೇಕ್ಷಿಸಲ್ಪಡುತ್ತವೆ.

ಕೆಂಪುಹೊಳೆ ಫಾಟಿ ಫಾರೆಸ್ಟ್. ಕಬ್ಬಿನಾಲೆ ಡಿಟೋ } ಮಂಜರಾಬಾದ್ ತಾಲ್ಲೂಕು.

2. ದರಖಾಸ್ತುಗಳು ನಾಟುಗಳನ್ನು ಯೆಳದು ಹಾಸನದಲ್ಲಿರುವ ಡಿಪೋಕ್ಕೆ ಹೇರುವ ಬಗ್ಯೆ ದರಖಾಸ್ತು ಯೆಂಬದಾಗಿ ವಿಳಾಸ ಬರೆಯಲ್ಪಡತಕ್ಕದ್ದು.

3. ನಗದಾಗಿಯಾಗಲಿ, ಕರೆನ್ಸಿ ನೋಟಿನ ಮೂಲಕವಾಗಿಯಾಗಲಿ, ದರಖಾಸ್ತಿನೊಡನೆ 200 ರೂಪಾಯಿಗಳು ಕಳುಹಿಸಲ್ಪಟ್ಟಿ ಹೊರತು ಅನ್ಯಥಾ ಯಾವ ದರಖಾಸ್ತು ಅಂಗೀಕರಿಸಲ್ಪಡಲಾರದು.